ಸಂಚಿಕೆ ೫೫
ಮೇ 2018

# ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ

## ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



ಚಿಗುರು ಕನ್ನಡ ಪಾಠಶಾಲೆ -ಶಾರ್ಲೆಟ್

ಸಂಚಿಕೆ ೫
ಮೇ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್

ಈ ಸಂಚಿಕೆಯಲ್ಲಿ ...

ಸಂಪಾದಕೀಯ ಪುಟ ೧
ಪೋಷಕರ ಅಂಕಣ ಪುಟ ೨-೩
ಹಬ್ಬ ಪುಟ ೪
ಅ ಆ ಅಡ್ವೆಂಚರ್ ಪು ೫
ಪ್ರವಾಸ ಪುಟ ೬
ಚಿಣ್ಣರ ಚಿತ್ರ ಕಲೆ ಪುಟ ೭
ನಾ ಓದಿದ ಕಥೆ ಪುಟ ೮
ನಾ ಕಂಡ ಸಿನಿಮಾ ಪುಟ ೯
ಪದ ಹುಡುಕೋಣ ಪುಟ ೧೦
ಕ್ರೀಡೆ - ಚದುರಂಗ - ಪುಟ ೧೧


ರಜನೀ


ಸೋಹಾನ್


ಪ್ರದ್ಯುಮ್ನ


ರಾಹಿತ್ಯ


ಆರುಶ್

## ಸಂಪಾದಕೀಯ: ರಜನೀ ಮಹೇಶ್






"ಹಸಿದು ಹಲಸು, ಉಂಡು ಮಾವು" ಎಂಬ ಮಾತಿದೆ. ಬೇಸಿಗೆ ರಜೆ ಅಂದ ಕೂಡಲೇ ನೆನಪಾಗುವುದು ಹಲಸಿನ ಹಣ್ಣು. ನಮ್ಮ ಕರಾವಳಿ ಮತ್ತು ಮಲೆನಾಡಿನಲ್ಲಿ ಹುಟ್ಟಿ ಬೆಳೆದವರಿಗೆ ಈ ಅನುಭವ ಮರೆಯಲಾಗದ್ದು. ರಜೆಯಲ್ಲಿ ಅಜ್ಜಿ ಮನೆ, ಅತ್ತೆ ಮನೆ, ದೊಡ್ಡಮ್ಮ ಮನೆ ಎಲ್ಲಿ ಹೋದರೂ ಹಲಸಿನ ಹಣ್ಣು.

ಮಕ್ಕಳೇ, ಹಲಸಿನ ಹಣ್ಣು ಅಂದ ಕೂಡಲೆ, ಕೈಯಲ್ಲಿ ನ್ಯೂಸ್ ಪೇಪರ್, ಎಣ್ಣೆ ಕಂಚು(ಕೊಬ್ಬರಿ ಎಣ್ಣೆಯ ಪಾತ್ರೆ) ಹಿಡಿದುಕೊಂಡು ಓಡುತ್ತಿದ್ದೆವು. ಬೆಳಗಿನ ತಿಂಡಿ ಹಲಸಿನ ಹಣ್ಣು. ಹಲಸಿನ ಹಣ್ಣು ಕತ್ತರಿಸಲ್ ಶುರುಮಾಡಿದರೆ ಕೂಡಲೇ ಹಟ್ಟಿಯಿಂದ ನನಗೂ ಬೇಕೂ ಅನ್ನೋ ಸುರಭಿ ದನ ... ಮಕ್ಕಳೇ ಎಲ್ಲ ಹಣ್ಣು ತಿನ್ನಬೇಡಿ, ಸಂಜೆ ಮುಳ್ಕ ಮಾಡುವ ಅನ್ನೋ ಅಮ್ಮ, ಮುಳ್ಕ ಬೇಡ ಹಪ್ಪಳ ಮಾಡುವ ಅನ್ನೋ ಅಮ್ಮಮ್ಮ .... ಎಷ್ಟು ಸುಂದರವಾದ ನೆನಪುಗಳು ಅಲ್ವಾ?

ಈ ಹಲಸಿನ ಸೀಸನ್ ನಲ್ಲಿ ಮಾಡುವ ಖಾದ್ಯ ಗಳು ಒಂದೇ ಎರಡೇ? ಮೊದಲಿಗೆ ನನಗೆ ಇಷ್ಟವಾದ ಕಡಬು. ಗೇರು ಎಲೆಯ(ಗೋಡಂಬಿ ಗಿಡದ ಎಲೆ) ಮಧ್ಯದಲ್ಲಿ ಹಿಟ್ಟು ಹಾಕಿ ಹಬೆಯಲ್ಲಿ ಬೇಯಿಸುವುದು. ಕಡುಬಿನ ಜೊತೆಗೆ ಗೋಡಂಬಿ ಚಟ್ನಿ, ಜೇನುತುಪ್ಪ ... ಆಹಾ ಸ್ವರ್ಗ! ಇನ್ನು ಹಲಸಿನ ಹಣ್ಣಿನ ಪಾಯಸ, ಮುಳ್ಕ, ದೋಸೆ, ಕಾಯಿ ತೊಳೆ ದೋಸೆ, ಚಿಪ್ಸ್, ಕಡ್ಗಿ ಪಲ್ಯ, ಕಾಯಿ ಹಪ್ಪಳ, ಹಣ್ಣಿನ ಹಪ್ಪಳ, ಹಲಸಿನ ಬೀಜದ ಒಗ್ಗರಣೆ, ಬೀಜದ ಸಾರು, ಬೀಜದ ಹುಳಿ ... ಹೀಗೆ ಹೇಳುತ್ತಾ ಹೋದರೆ ಲಿಸ್ಟ್ ಮುಗಿಯುವುದೇ ಇಲ್ಲ.

ಈ ಹಲಸಿನ ಹಣ್ಣಿನಲ್ಲಿ ಬಕ್ಕೆ ಮತ್ತು ಇಂಬ(ಬಿಳುವ) ಎಂಬ ೨ ಪ್ರಭೇದಗಳಿವೆ. ಬಕ್ಕೆ ಹಣ್ಣು ಗಟ್ಟಿಯಾಗಿದ್ದು ತಿನ್ನಲು ರುಚಿಯಾಗಿರುತ್ತದೆ. ಇಂಬ (ಬಿಳುವ) ಹಣ್ಣು ಮೆತ್ತಗೆ ಮತ್ತು ಗಂಜಿಯಾಗಿರುತ್ತದೆ. ಇದನ್ನು ನಾವು ಗುಳುಂ ಎಂದು ನುಂಗಬೇಕು. ಹೋಮ ಹವನಗಳಿಗೆ ಹಲಸಿನ ಕಟ್ಟಿಗೆಯು ಬಹಳ ಮುಖ್ಯ. ಬೆಳೆದ ಹಲಸಿನ ಮರ ಉತ್ತಮ ಮೋಪಾಗುತ್ತದೆ. ಪೀಠೋಪಕರಣಗಳಿಗೆ, ಮನೆಯ ಬಾಗಿಲುಗಳಿಗೆ ಹಲಸಿನ ಮರವನ್ನು ಉಪಯೋಗಿಸುತ್ತಾರೆ.

ಮಕ್ಕಳಿಗೆ ಬೇಸಿಗೆ ರಜೆ ಶುರು ಆಗ್ತಿದೆ. ಎಷಿಯನ್ ಮಾರ್ಕೆಟ್ ಗೆ ಹೋಗಿ ಒಂದು ಹಲಸಿನ ಹಣ್ಣು ತರಲೇ ಬೇಕು. ಮುಳ್ಕ, ಕಡುಬ್ಬು, ಪಾಯಸ ಎಲ್ಲವನ್ನು ಮಾಡಿ ತಿನ್ನಲೇ ಬೇಕು. ಈ ದೂರದ ದೇಶದಲ್ಲಿ ನನ್ನ ಬಾಲ್ಯ, ಬೇಸಿಗೆ ರಜೆ, ಮಳೆ... ಅಜ್ಜಿಮನೆ ಎಲ್ಲವನ್ನು ಕಣ್ಣ ಮುಂದೆ ತಂದಿಟ್ಟಿತು ಈ ಹಲಸಿನ ಹಣ್ಣು !







*ಹಚ್ಚೇವು ಕನ್ನಡದ ದೀಪ...*



## ಪೋಷಕರ ಅಂಕಣ : ವಿನೋದ್ ಕುಮಾರ್

## ಹಣಕಾಸಿನ ಸಾಕ್ಷರತೆ

ಬೆಂಜಮಿನ್ ಫ್ರಾಂಕ್ಲಿನ್ ಒಮ್ಮೆ ಹೇಳಿದರು "ಜ್ಞಾನದ ಹೂಡಿಕೆ ಯಾವಾಗಲೂ ಅತ್ಯುತ್ತಮ ಹಿತಾಸಕ್ತಿಯನ್ನು ಕೊಡುತ್ತದೆ" ಎಂದು. ನಾನು ಈ ಬುದ್ಧಿವಂತಿಕೆಯನ್ನು ವಿಸ್ತರಿಸಲು ಬಯಸುತ್ತೇನೆ, "ಆರ್ಥಿಕ ಜ್ಞಾನದ ಹೂಡಿಕೆ ಯಾವಾಗಲೂ ಬಡ್ಡಿಯನ್ನು ನೀಡುತ್ತದೆ".

ಜೀವನದಲ್ಲಿ ಓದುವುದು ಎಷ್ಟು ಮುಖ್ಯವೋ ಹಾಗೇ ಹಣಕಾಸನ್ನು ಬಳಸುವುದು ಅಷ್ಟೇ ಮುಖ್ಯ. ನಾವು ಕಷ್ಟಪಟ್ಟು ವಿದ್ಯಾಭ್ಯಾಸ ಮುಗಿಸಿದ ಮೇಲೆ ನಮಗೆ ಒಳ್ಳೆ ಕೆಲಸ ಸಿಗುತ್ತದೆ, ಕೈತುಂಬಾ ಸಂಬಳ ಬರುತ್ತದೆ. ನಾವು ನಮ್ಮ ಹಣವನ್ನು ಹೇಗೆ ಖರ್ಚು ಮಾಡಬೇಕು ಎನ್ನುವುದನ್ನು ಕಲಿಯಬೇಕು.

ನಾನು ಒಂದು ರೈತ ಕುಟುಂಬದಲ್ಲಿ ಬೆಳೆದವನು, ನಮ್ಮ ಮನೆಯವರು ವ್ಯವಸಾಯ ಮಾಡಿ ದುಡ್ಡು ಸಂಪಾದಿಸುತ್ತಿದ್ದರು. ಅವರು ಉಳಿಸಿದ ಹಣದಿಂದ ನಮಗೆ ಕಾಲೇಜಿಗೆ ಹೋಗಲು ಸಹಾಯವಾಯಿತು. ಇಲ್ಲದಿದ್ದರೆ ನಾವು ಈಗಲೂ ಕೂಡ ವ್ಯವಸಾಯ ಮಾಡಬೇಕಿತ್ತು.

ನಾನು ನಿಮಗೆ ಹೇಳುವುದು ಏನೆಂದರೆ, ಜೀವನದ ಮುಂಚಿನ ದಿನಗಳಲ್ಲಿ ನಾವು ಹಣವನ್ನು ಹೇಗೆ ಉಳಿಸುವುದು ಎಂಬುದನ್ನು ಕಲಿಯುವುದು ಬಹಳ ಮುಖ್ಯ. ಮಳೆಯ ದಿನಗಳಿಗಾಗಿ ಉಳಿಸುವುದು, ಸ್ಟಾಕ್ ಮಾರ್ಕೆಟ್ ಅಥವಾ ರಿಯಲ್ ಎಸ್ಟೇಟ್ ನಲ್ಲಿ ಬಂಡವಾಳ ಹೂಡುವುದು, ನಿವೃತ್ತಿಗಾಗಿ ಉಳಿತಾಯ ಮಾಡುವುದು ಬಹಳ ಮುಖ್ಯ. ಇಂದು ಹಣ ಉಳಿಸಿದರೆ ನಮಗೆ ಕಷ್ಟ ಕಾಲದಲ್ಲಿ ಅದರ ಉಪಯೋಗ ಬರುತ್ತದೆ ಮತ್ತು ಉಳಿಸಿದ ಹಣದಿಂದ ನಾವು ಬೇರೆ ದೇಶಗಳಿಗೆ ಪ್ರವಾಸ ಮಾಡಿ ಅದರ ಅನುಭವವನ್ನು ಪಡೆಯಬಹುದು.

ನೀವು ಇಂದಿನಿಂದಲೇ ಉಳಿತಾಯ ಮಾಡಲು ಆರಂಭಿಸಬಹುದು. ನಿಮ್ಮ ತಂದೆ ತಾಯಿ ನಿಮಗೆ ಹಣ ನೀಡಿದಾಗ ಅದನ್ನು ಸಂಪೂರ್ಣವಾಗಿ ಖರ್ಚು ಮಾಡಬೇಡಿ. ಸ್ವಲ್ಪ ಹಣವನ್ನು ಖರ್ಚು ಮಾಡಿ ಮಿಕ್ಕಿದ್ದನ್ನು ಪಿಗ್ಗಿ (piggy bank) ಬ್ಯಾಂಕಿನಲ್ಲಿ ಹಾಕಿ. ಪಿಗ್ಗಿ (Piggy Bank) ಬ್ಯಾಂಕ್ ತುಂಬಿದ ಮೇಲೆ ನೀವು ನಿಮ್ಮ ತಂದೆ ತಾಯಿಗೆ ಹೇಳಿ ಬ್ಯಾಂಕಿನಲ್ಲಿ ಅಕೌಂಟ್ ಓಪನ್ ಮಾಡಿ ಅದರಲ್ಲಿ ಹಣವನ್ನು ಠೇವಣಿ ಮಾಡಿ ಇಲ್ಲವೇ ಸ್ಟಾಕ್ ಮಾರ್ಕೆಟ್ ನಲ್ಲಿ ಇನ್ವೆಸ್ಟ್ ಮಾಡಿ.



## ಪೋಷಕರ ಅಂಕಣ : ವಿನೋದ್ ಕುಮಾರ್

## ಹಣಕಾಸಿನ ಸಾಕ್ಷರತೆ

ಮುಂಚಿತವಾಗಿ ಹೂಡಿಕೆ ಮಾಡುವುದರ ಮೂಲಕ ನೀವು ಹೆಚ್ಚು ಬಡ್ಡಿಯನ್ನು ಪಡೆಯುತ್ತೀರಿ ಮತ್ತು ನಂತರ ಅದನ್ನು ಸಂಕಷ್ಟದ ಸಮಯದಲ್ಲಿ ಬಳಸಬಹುದು ಮತ್ತು ನೀವು ದೊಡ್ಡವರಾದಾಗ ನಿಮ್ಮ ಅವಶ್ಯಕತೆಗೆ ಬೇಕಾದಾಗ ಉಪಯೋಗಿಸಿಕೊಳ್ಳಬಹುದು.




ನಿಮಗೆ ಸ್ಫೂರ್ತಿ ಪಡೆದುಕೊಳ್ಳಲು ಒಂದು ಕತೆ ಹೇಳುತ್ತೇನೆ, ವಾರೆನ್ ಬಫೆಟ್ ಅಮೆರಿಕಾದ ವ್ಯವಹಾರ ಉದ್ಯಮಿ, ಹೂಡಿಕೆದಾರರು ಮತ್ತು ಲೋಕೋಪಕಾರಿ. ಅವರು 11 ನೇ ವಯಸ್ಸಿನಲ್ಲಿ ತಮ್ಮ ಮೊದಲ ಹೂಡಿಕೆ ಮಾಡಿದರು, 15 ನೇ ವಯಸ್ಸಿನಲ್ಲಿ ಅವರು $ 15,000 ಮೌಲ್ಯದವರಾಗಿದ್ದರು ಮತ್ತು ಈಗ 87 ವರ್ಷ ವಯಸ್ಸಿನಲ್ಲಿ ಅವರು $ 83,100,000,000 ($ 83 ಶತಕೋಟಿ) ಮೌಲ್ಯದವರು. ಇದು ಉಳಿತಾಯ ಮತ್ತು ಹೂಡಿಕೆಗಳ ಶಕ್ತಿ.

ಷಾರ್ಲೆಟ್ನಲ್ಲಿ ನಾವು Junior Achievementsಗಳಂತಹ ಸಂಸ್ಥೆಯನ್ನು ಹೊಂದಲು ನಾವೆಲ್ಲ ಅದೃಷ್ಟಶಾಲಿಗಳು. ಬಜೆಟ್ ಮತ್ತು ಹೂಡಿಕೆಗಳನ್ನು ಹೇಗೆ ನಿರ್ವಹಿಸುವುದು ಎಂಬುದರ ಕುರಿತು ನೀವು ಇಲ್ಲಿ ತಿಳಿದುಕೊಳ್ಳಬಹುದು. ನೀವು ನಿಮ್ಮ ಶಾಲೆಯ ಶಿಕ್ಷಕರೊಂದಿಗೆ Junior Achievements ಕಾರ್ಯಕ್ರಮಗಳಿಗೆ ಕರೆದೊಯ್ಯಲು ಮಾತನಾಡಿ, ನೀವು https://www.juniorachievement.org/web/ja-usa/ja-programs ನಲ್ಲಿ ಮಾಹಿತಿಯನ್ನು ಪಡೆಯಬಹುದು.

ಶಾಲೆಯ ಪಠ್ಯಕ್ರಮದೊಂದಿಗೆ ನೀವು, ಆರ್ಥಿಕ ಸಾಕ್ಷರತೆಗೆ ಸಹಾಯ ಮಾಡಲು ನಿಮ್ಮ ಹೆತ್ತವರನ್ನು ಕೇಳಿಕೊಳ್ಳಿ. ನೀವು ಹೆಚ್ಚಿನ ಮಾಹಿತಿಯನ್ನು ಇಲ್ಲಿ ಕಾಣಬಹುದು

https://www.yflfoundation.org/
http://www.themint.org/
https://www.practicalmoneyskills.com/teach/lesson_plans








## ಅಮ್ಮಂದಿರ ದಿನ (ಮದರ್ಸ್ ಡೇ ) : ಆರುಶ್ ಯೆಲಿಮೆಲಿ


ಅಮ್ಮನ ದಿನವನ್ನು ಆಚರಿಸಲು ಪ್ರತ್ಯೇಕವಾದ ದಿನ ಬೇಕಿಲ್ಲ. ಎಂದೆಂದೂ ಅಮ್ಮನ ದಿನವೇ. ಪ್ರಪಂಚದ ಸುಮಾರು 40 ದೇಶಗಳಲ್ಲಿ ಅಮ್ಮನ ದಿನವನ್ನು ಆಚರಿಸುತ್ತಾರೆ . ಅಮೇರಿಕಾದಲ್ಲಿ 1908 ರಲ್ಲಿ Anna Jarvis ಮೊದಲನೆಯ ಸಲ ತನ್ನ ತಾಯಿ Ann María Jarvis ನೆನಪಿಗಾಗಿ Mother’s Day ಆಚರಣೆ ಮಾಡಿದರು.

Ann María Jarvis, ಒಳ್ಳೆಯ ಸಮಾಜ ಸೇವಕಿಯಾಗಿದ್ದರು. ಅವರು ಸಮಾಜದ ಬಡ ಹೆಂಗಸರು ಹಾಗು ಅನಾಥ ಮಕ್ಕಳ ಆರೋಗ್ಯವನ್ನು ನೋಡಿಕೊಂಡು ಅವರೆಲ್ಲರ ಮಮತೆಯ ಅಮ್ಮನಾದರು. ಹಾಗು Civil War ಸಮಯದಲ್ಲಿ ಯೋಧರಿಗೆ ಊಟ ಹಾಗು ವಸತಿಯನ್ನು ಕೊಟ್ಟು ನೋಡಿಕೊಂಡರು. 1911 ರಲ್ಲಿ ಅಮೇರಿಕಾ ಸರ್ಕಾರ May ತಿಂಗಳ ಎರಡನೇ ಭಾನುವಾರವನ್ನು "Mother’s Day” ಎಂದು ಘೋಷಿಸಿತು.

ಈ ಭೂಮಿಯಮೇಲೆ ಬರುವ ಪ್ರತಿಯೊಬ್ಬ ಮಗುವಿನ ಮೊದಲ ಪದ ಅಮ್ಮ. ಪ್ರತಿಯೊಂದು ಭಾಷೆಯಲ್ಲೂ ಅಮ್ಮ ಎಂಬುದು ಅತ್ಯಂತ ಮಧುರವಾದ ಶಬ್ದ. ನಮ್ಮ ವೇದೋಪನಿಷತ್ತುಗಳಲ್ಲಿ ವಿಘ್ನನಿವಾರಕನಾದ ಗಣಪ ಪ್ರಥಮ ವಂದಿತನಾದರೆ, ಪ್ರಥಮ ಪೂಜಿತೆ ತಾಯಿ. ಮಾತೃ ದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವ, ಅಥಿತಿ ದೇವೋಭವ ಎಂದು ಹೇಳುವಾಗ ತಾಯಿಗೆ ಅಗ್ರಸ್ಥಾನ.


ಜನನಿ ಜನ್ಮಭೂಮಿಸ್ಚ ಸ್ವರ್ಗಾದಪಿ ಗರೀಯಸಿ, ಅಂದರೆ ತಾಯಿ ಹಾಗು ತಾಯಿನಾಡು ಸ್ವರ್ಗಕ್ಕಿಂತ ಮಿಗಿಲಾದವು. ಎಷ್ಟು ನಿಜ ಅಲ್ವಾ. ಚಿಗುರು ಪಾಠಶಾಲೆಯ ಮಕ್ಕಳೆಲ್ಲ ಸೇರಿ 2 ವರ್ಷದ ಹಿಂದೆ "Mother’s day” ಆಚರಿಸಿದ್ವಿ, ತುಂಬಾ ಚನ್ನಾಗಿತ್ತು ಎಲ್ಲಾ ಅಮ್ಮಂದಿರು ತುಂಬಾ ಖುಷಿ ಪಟ್ಟಿದ್ದರು. ಅದು ನನ್ನ favorite Mother’s Day. Thank you ರಜನಿ Aunty .


## ಅ ಆ ಅಡ್ವೆಂಚರ್: ಇಂಚರ ಗೋಪಿನಾಥ್




ನಾನು ಮತ್ತು ನಮ್ಮ ಲಿಯೊ

## ರಂಗ್ ರಂಗ್ ರಂಗೋಲಿ









## ನನ್ನ ಕ್ರೂಸ್ ಪ್ರವಾಸ : ಸೋಹಾನ್ ನಂದೀಶ್

ನಾನು ನನ್ನ ಅಮ್ಮ ಅಪ್ಪ ಮತ್ತು ಅವರ ಫ್ರೆಂಡ್ ಫಾಮಿಲಿ ಜೊತೆಯಲ್ಲಿ ಬಹಾಮಾಸ್ಗೆ ಕ್ರೂಸ್ ನಲ್ಲಿ 5 ದಿನಗಳ ಕಾಲ ಹೋಗಿದ್ವಿ. ಕ್ರೂಸ್ ಜರ್ನಿ ನನಗೆ ತುಂಬಾ ಇಷ್ಟ ಆಯ್ತು . ಕ್ರೂಸ್ ನಲ್ಲಿ ಇದ್ದ ನಮ್ಮ ರೂಂ ನ ಕಿಟಕಿಯಾ ಮುಂದೆ ಕೂತು ಓಶನ್ ನೋಡೋಕೆ ತುಂಬಾ ಚೆನ್ನಾಗಿತ್ತು . ನಮ್ಮ ಕ್ರೂಸ್ ತುಂಬಾ ದೊಡ್ಡದಾಗಿತ್ತು. ಕ್ರೂಸ್ ನ ಟಾಪ್ ಫ್ಲೂರ್ನಲ್ಲಿ ದೊಡ್ಡ ವಾಟರ್ ಸ್ಲೈಡ್, ಸ್ವಿಮ್ಮಿಂಗ್ ಪೂಲ್ , ಜಕೂಸಿ ಮತ್ತೆ ಮಿನಿ ಗಾಲ್ಫ್ ಇತ್ತು. ಅದರಲ್ಲಿ ಜಕೂಸಿ ನನ್ನ ಫೇವರೆಟ್. ಕ್ರೂಸ್ ನಲ್ಲಿ ಮಕ್ಕಳಿಗೆ ಓಷಿಯನ್ ಕ್ಯಾಂಪ್ ಇತ್ತು. ಅಲ್ಲಿ ಮಕ್ಕಳಿಗೆ ತುಂಬಾ ಆಕ್ಟಿವಿಟೀಸ್ ಮಾಡಿಸಿದ್ರು. ಪೈರೆಟ್ಸ್ ಟ್ರೇಷರ್ ಹಂಟ್ , ಡೈನಾಸರ್ ಗ್ಯಾಲೋರಿ, ಮೂವಿ ನೈಟ್, ಇನ್ನೂ ತುಂಬಾ ಆಟ ಆಡಿಸಿದ್ರು.

ಮೂರನೆ ದಿನ ನಾವು ಹಾಫ್ ಮೂನ್ ಕೆ ಐಲ್ಯಾಂಡ ಗೆ ಹೋದೆವು. ಆ ಐಲ್ಯಾಂಡ್ ನಲ್ಲಿ ನಾವು ಸ್ಟಾರ್ ಫಿಷ್ ರೆ ಫಿಷ್, ಸ್ನೈಲ್ ಎಲ್ಲ ನೋಡಿದ್ವಿ. ಬೀಚ್ ನಲ್ಲಿ ಆಡಿದ್ವಿ . ಸ್ಯಾಂಡ್ ನಲ್ಲಿ ಆಡೋದು ಮಜಾ ಬಂತು. ಆವತ್ತು ತುಂಬಾ ಮಳೆ ಬರುತ್ತಾ ಇತ್ತು. ಆಮೇಲೆ ಕ್ರೂಸ್ ಗೆ ವಾಪಾಸು ಹೋದ್ವಿ.





ನಾಲ್ಕನೆ ದಿನ ನಾವು ಬಹಾಮಾಸ್ ಕ್ಯಾಪಿಟಲ್ ನಸಾಯು ಗೆ ಹೋದ್ವಿ. ಅಲ್ಲಿ ತುಂಬಾ ಬಿಸಿಲು ಇತ್ತು. ನಾವು ಒಂದು ಟ್ಯಾಕ್ಸಿ ಯಲ್ಲಿ ಸಿಟಿ ಟೂರ್ ಹೋಗಿದ್ವಿ. ಅಲ್ಲಿಂದ ಬಸ್ ನಲ್ಲಿ ಕೇಬಲ್ ಬೀಚ್ ಹೋಗಿ ನೀರಲ್ಲಿ ಆಟ ಆಡಿದ್ವಿ. ಸಂಜೆ ಕ್ರೂಸ್ ಗೆ ವಾಪಾಸ್ ಹೋದ್ವಿ.

ಕ್ರೂಸ್ ನಲ್ಲಿ ಹೋಗೋವಾಗ ಸನ್ ಸೆಟ್ ತುಂಬಾ ಚೆನ್ನಾಗಿ ಕಾಣ್ತು. ಕ್ರೂಸ್ ನ ಟಾಪ್ ಫ್ಲೋರ್ ನಲ್ಲಿ ಓಶನ್ ನೋಡೋದು ತುಂಬಾ ಇಷ್ಟ ಆಯಿತು. ಹಾಗೂ ಕ್ರೂಸ್ ನಲ್ಲಿ ಊಟ ತುಂಬಾ ಚೆನ್ನಾಗಿ ಇತ್ತು . ತುಂಬಾ ವೆರೈಟಿಸ್ ಇರುತಿತ್ತು .ಐಸ್ ಕ್ರೀಂ ಕೂಡ ಇರುತಿತ್ತು. ಕೊನೆಯಲ್ಲಿ ಕ್ರೂಸ್ನಿಂದ ಬರೋದಿಲ್ಲ ಅಂತ ಹಠ ಮಾಡುತಿದ್ದೆ. ಅಲ್ಲಿಯ ಆಕ್ಟಿವಿಟೀಸ್ ಅನ್ನು ತುಂಬಾ ಮಿಸ್ ಮಾಡ್ಕೊಳ್ತೀನಿ.













## ಚಿಣ್ಣರ ಚಿತ್ರ ಕಲೆ



ಕೃಷ್ಣಮೂರ್ತಿ


ಅಮಿತ್


ಪ್ರದ್ಯುಮ್ನ


ಪ್ರಮಿತಿ





## ನಾ ಓದಿದ ಕಥೆ : ರಾಹಿತ್ಯ ಶೈವ

ಒಂದು ಕಾಡಲ್ಲಿ ಗುಬ್ಬಕ್ಕ ಮತ್ತು ಕಾಗಕ್ಕ ಫ್ರೆಂಡ್ಸ್ ಇದ್ರು. ಗುಬ್ಬಕ್ಕ ಕಲ್ಲಿಂದ ಮನೆ ಕಟ್ಟಿದ್ಲು. ಕಾಗಕ್ಕ ಮಣ್ಣಿನ ಮನೆ ಕಟ್ಟಿದ್ಲು. ಒಂದು ರಾತ್ರಿ ಜೋರಾಗಿ ಮಳೆ ಬಂತು. ಕಾಗಕ್ಕ ಮನೆ ಎಲ್ಲ ಕರಗಿ ಹೋಯಿತು. ಕಾಗಕ್ಕ ಗುಬ್ಬಕ್ಕಗೆ ಫೋನ್ ಮಾಡಿದ್ಲು. ನನ್ನ ಮನೆ ಕರಗಿಹೋಯಿತು. ತುಂಬಾ ಚಳಿ ಆಗ್ತಿದೆ, ನಿನ್ನ ಮನೆಗೆ ಬರ್ಲಾ ಅಂತು. ಅದಕ್ಕೆ ಗುಬ್ಬಕ್ಕ ಆಯ್ತು ಬಾ ಅಂತು. ಕಾಗಕ್ಕ ರಾತ್ರಿ ಗುಬ್ಬಕ್ಕ ಮನೇಲಿ ಇದ್ದ ಎಲ್ಲಾ ಕಡ್ಲೆ ಬೀಜ ತಿಂದು ಖಾಲಿ ಮಾಡ್ತು. ಅದಕ್ಕೆ ಗುಬ್ಬಕ್ಕನಿಗೆ ತುಂಬಾ ಬೇಜಾರು ಆಯ್ತು. ಮತ್ತೆ ಮಳೆ ಬಂತು. ಆವಾಗ ಕಾಗಕ್ಕ ಮತ್ತೆ ಗುಬ್ಬಕ್ಕ ಮನೆಗೆ ಬಂದು ಎಲ್ಲ ಕಡ್ಲೆ ಬೀಜ ತಿಂದು ಖಾಲಿ ಮಾಡ್ತು. ಮತ್ತೊಂದು ದಿನ ಮಳೆ ಬಂತು. ಆಗ ಕಾಗಕ್ಕ ಮತ್ತೆ ಗುಬ್ಬಕ್ಕ ಮನೆಗೆ ಬಂತು. ಈ ಸರಿ ಗುಬ್ಬಕ್ಕ ಕಡ್ಲೆ ಬೀಜ ಬಾಕ್ಸ್ ಲ್ಲಿ ಕಲ್ಲು ಇಟ್ಟಿತ್ತು . ಅದನ್ನು ತಿಂದು ಕಾಗಕ್ಕ ಹಲ್ಲು ಮುರಿದು ಹೋಯ್ತು.

**ನೀತಿ : “ಕದ್ದು ತಿನ್ನಬಾರದು ... ಮೋಸ ಮಾಡಬಾರದು “**



## ಮೇ ನಲ್ಲಿ ಜನಿಸಿದ ಪ್ರಸಿದ್ಧ ಕನ್ನಡಿಗರು : ನಮಿತ ಪಂಡಿತ್

1. ಕೆ.ಎಸ್. ಅಶ್ವತ್ - ಮೇ 05 1925
2. ಎಸ್.ಎಂ.ಕೃಷ್ಣ - 01-ಮೇ -1932
3. ಡಾ. ದೇವಿ ಪ್ರಸಾದ್ ಶೆಟ್ಟಿ - 08-ಮೇ -1953
4. ಕ್ರೇಜಿ ಸ್ಟಾರ್ ವಿ. ರವಿಚಂದ್ರನ್ - 30 ಮೇ -1961
5. ರೆಬೆಲ್ ಸ್ಟಾರ್ ಅಂಬರೀಶ್ - 29-ಮೇ -1952
6. ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ - 21-ಮೇ -1941
7. ಎನ್ ಕೃಷ್ಣ ರಾವ್ - ಆ ನಾ ಕೃ - 09-ಮೇ-1908
8. ಮೇಘನಾ ರಾಜ್ - 03-ಮೇ-1990
9. ಶಿರೀಶ್ ಕುಂದರ್ - 24 ಮೇ-1973
10. ವಜ್ರಮುನಿ - 10-ಮೇ -1944








## ನಾ ಕಂಡ ಸಿನಿಮಾ ಪ್ರಚಂಡ ಪುಟಾಣಿಗಳು: ಪ್ರದ್ಯುಮ್ನ ನರೇಶ್

ಈ ಚಿತ್ರವು ಒಂದು ರೋಮಾಂಚಕ ಕಥೆ. ಈ ಚಿತ್ರದಲ್ಲಿ ಮಾ. ರಾಮಕೃಷ್ಣ ಹೆಗ್ಡೆ , ಮಾ. ಭಾನುಪ್ರಕಾಶ್, ಬೇಬಿ ಇಂದಿರಾ ಮತ್ತು ಮಾ. ನವೀನ್ ಪ್ರಮುಖ ಪಾತ್ರಗಳು. ಇವರ ಜೊತೆ ನಾಯಿ ಮತ್ತು ಹನುಮ ಸ್ನೇಹಿತರಾಗಿ ಸಹಾಯ ಮಾಡಿಕೊಂಡು ಇರುತ್ತಾರೆ .

ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಬೇಕೆಂದು ಹಣ ಸೇರಿಸಲು ಪ್ರಯತ್ನಿಸುತಾರೆ, ಆದರೆ ಅವರ ಮೊದಲ ಪ್ರಯತ್ನಕ್ಕೆ ಅವರಿಗೆ ಸೇರಿದ ದುಡ್ಡು ಬರಿ ೩೦೦ರೂ ಗಳು ಬಡ ಮಕ್ಕಳ ಸಹಾಯಕ್ಕೆ ಅವರಿಗೆ ತುಂಬಾ ಜಾಸ್ತಿ ಹಣ ಬೇಕಾಗಿತ್ತು.

ಅದೇ ಸಮಯದಲ್ಲಿ ಅವರು ನ್ಯೂಸ್ ಪೇಪರ್ ನಲ್ಲಿ ಜಾಹಿರಾತು ನೋಡುತ್ತಾರೆ, ಬೆಂಗಳೂರು ಸೆಂಟ್ರಲ್ ಜೈಲಿನಿಂದ ತಪ್ಪಿಸಿಕೊಂಡ ಕೈದಿಗಳನ್ನು ಹಿಡಿದುಕೊಟ್ಟವರಿಗೆ ಅಥವಾ ಸುಳಿವು ಕೊಟ್ಟವರಿಗೆ ಸರ್ಕಾರ ಬಹುಮಾನವಾಗಿ ೫೦,೦೦೦ ರೂ ಗಳನ್ನು ಕೊಡುತ್ತಾರೆಂದು. ಅದನ್ನು ಓದಿದ ಮಕ್ಕಳು ಕೈದಿಗಳನ್ನು ಹುಡುಕಲು ಬೆಂಗಳೂರಿಗೆ ಹೊರಟರು , ಬಂದ ದುಡ್ಡನ್ನು ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಉಪಯೋಗಿಸಲು ನಿರ್ಧರಿಸುತ್ತಾರೆ.

ಈ ಮಕ್ಕಳು ಬೆಂಗಳೂರಿಗೆ ಬಂದು ಪಡುವ ಕಷ್ಟ ಮತ್ತು ಸಾಹಸಗಳು ಎಷ್ಟೋ. ಅವರಿಗೆ ಬೆಂಗಳೂರಿನಲ್ಲಿ ರುದ್ರ (ಟೈಗರ್ ಪ್ರಭಾಕರ್) ಸಹಾಯ ಮಾಡುತ್ತಾರೆ. ಎಲ್ಲರೂ ಒಟ್ಟಾಗಿ ಸೇರಿ ಕೈದಿಗಳನ್ನು ಹುಡುಕಿ ಪೊಲೀಸರಿಗೆ ಒಪ್ಪಿಸುತ್ತಾರೆ.

ಇದು ನಮ್ಮ ಪ್ರಚಂಡ ಪುಟಾಣಿಗಳ ಸಾಹಸವು. ನೀವು ಎಲ್ಲರೂ ಈ ಮಕ್ಕಳ ಸಾಹಸವನ್ನು ನೋಡುತ್ತೀರಾ??

## ನುಡಿಮುತ್ತು :

೧. ವ್ಯಕ್ತಿಗೆ ಅರ್ಥವಾಗುವ ಭಾಷೆಯಲ್ಲಿ ನೀವು ಮಾತನಾಡಿದರೆ ಆತನ ತಲೆಗೆ ಹೋಗುತ್ತದೆ. ಆತನ ಮಾತೃಭಾಷೆಯಲ್ಲಿ ಹೇಳಿದರೆ ಅದು ಆತನ ಹೃದಯ ತಲುಪುತ್ತದೆ..

೨. ದಾರಿ ಸುಂದರವಾಗಿದ್ದಾಗ ಅದು ತಲುಪುವ ಗುರಿಯ ಬಗ್ಗೆ ತಿಳಿದು ಕೊಳ್ಳಬೇಕು. ಆದರೆ ಗುರಿ ಸುಂದರವಾಗಿದ್ದಾಗ ದಾರಿಯ ಬಗ್ಗೆ ಯೋಚಿಸದೆ ಮುನ್ನೆಡೆಯಬೇಕು.

## ಜೋಕ್ಸ್ :ಪ್ರಮಿತಿ ಉಪಾಧ್ಯ

ಮೊನ್ನೆ ನಮ್ಮ ತಿಮ್ಮನ ಮನೆಗೆ ಐದು ಜನ ಬಾಲ್ಯದ ಗೆಳೆಯರು ಬಂದರು.
ಚಹಾ ಮಾಡಲು ತಿಂಮ ತನ್ನ ಹೆಂಡತಿಗೆ ಹೇಳಿದ.
ಹೆಂಡತಿ ಹೇಳಿದ್ಳು ಮನೇಲಿ ಸಕ್ಕರೆ ಇಲ್ಲ ತಗೊಂಡು ಬನ್ನಿ ಅಂತ.
ತಿಂಮ ಹೇಳಿದ ಪರವಾಗಿಲ್ಲ ಸಕ್ಕರೆ ಇಲ್ಲದೇ ಮಾಡು ನಾನು ಅಡ್ಜಸ್ಟ್ ಮಾಡುತೀನಿ ಅಂದ
ಸರಿ, ಒಂದು ಐದಾರು ಕಪ್ಪು ಚಹಾ ಮಾಡಿ ಗೆಳೆಯರಿಗೆ ಕೊಡ್ತಾ ತಿಂಮ ಹೇಳಿದ
ಇದರಲ್ಲಿ ಒಂದು ಕಪ್ ನಲ್ಲಿ ಸಕ್ಕರೆ ಹಾಕಿಲ್ಲ ಅದು ಯಾರಿಗೆ ಬರುತ್ತೊ ಅವರ ಮನೆಗೆ ಮುಂದಿನ ಭಾನುವಾರ ಎಲ್ಲರೂ ಊಟಕ್ಕೆ ಹೋಗೊಣ ಅಂದ.
ಚಹಾ ಕುಡಿದಾದ ಮೇಲೆ ತಿಂಮ ಕೇಳಿದ ಯಾರದು ....?
ಎಲ್ಲರೂ ಹೇಳಿದರು ನನಗೆ ಸಕ್ಕರೆ ಸ್ವಲ್ಪ ಜಾಸ್ತಿಯಾಗಿತ್ತು.....!!

**ಸುಭಾಷಿತ : ಅದೃಷ್ಟವಂತ ಎಂದರೆ ಅವಕಾಶವನ್ನು ಪಡೆಯುವವನು, ಬುದ್ಧಿವಂತ ಎಂದರೆ ಅವಕಾಶವನ್ನು ಸೃಷ್ಟಿಸಿಕೊಳ್ಳುವನು.**



## ಟಂಗ್ ಟ್ವಿಸ್ಟರ್ ಗಳು : ಪ್ರಕೃತಿ ಉಪಾಧ್ಯ

ಟಂಗ್ ಟ್ವಿಸ್ಟರ್ ಗಳು ಒಂದು ತರಹದ ನಾಲಿಗೆಯನ್ನು ಚುರುಕುಗೊಳಿಸುವ ಮಾತಿನ ಆಟಗಳು. ಇವು ನಮ್ಮ ಮಾತಿನ ಸ್ಪಷ್ಟತೆ ಮತ್ತು ಸರಾಗತನವನ್ನು (ನಿರರ್ಗಳತೆ) ವೃದ್ಧಿಸುತ್ತದೆ. ಇದು ಬರಿ ಮಕ್ಕಳಿಗಾಗಿ ಮಾತ್ರವಲ್ಲ. ನಟರು , ಪಬ್ಲಿಕ್ ಸ್ಪೀಕರ್ಗಳು ಇಂಥಹ ಟಂಗ್ ಟ್ವಿಸ್ಟರ್ ಗಳನ್ನು ಉಚ್ಚಾರ ಸ್ಪಷ್ಟತೆಗೆ ಮತ್ತು ಮುಖ, ಗಂಟಲು ಬಾಯಿಗೆ ಅಗತ್ಯ ವ್ಯಾಯಾಮಕ್ಕಾಗಿ ಬಳಸುತ್ತಾರೆ. ಮಕ್ಕಳಿಗೆ ಇದು ಒಂದು ರೀತಿಯ ವ್ಯಾಯಾಮ ಕೂಡ. ಟಂಗ್ ಟ್ವಿಸ್ಟರ್ ಗಳು ಮೆದುಳಿಗೆ ನಾಲಿಗೆಯ ಹಿಡಿತವನ್ನು ಕಲಿಸುತ್ತದೆ. ಟಂಗ್ ಟ್ವಿಸ್ಟರ್ ಗಳು ಪದ ಜೋಡಣೆ, ಸ್ಪಷ್ಟ ಉಚ್ಚಾರ ಗಳನ್ನು ಕಲಿಸುವ ಒಂದು ಮೋಜಿನ ಆಟ. ಈ ಟಂಗ್ ಟ್ವಿಸ್ಟರ್ ಗಳನ್ನು ನೀವೂ ಹೇಳಿ ನೋಡೋಣ!

೧. ಬಂಕಾಪುರದ ಕೆಂಪು ಕುಂಕುಮ, ಬಂಕಾಪುರದ ಕೆಂಪು ಕುಂಕುಮ

೨. ಕುರುಡು ಕುದುರುಗೆ ಹುರಿದ ಹುರಿಗಡಲೆ

೩. ಸಂಪಂಗಪ್ಪನ ಮಗ ಮರಿಸಂಪಂಗಪ್ಪ , ಮರಿಸಂಪಂಗಪ್ಪನ ಅಪ್ಪ ಸಂಪಂಗಪ್ಪ.

೪ . ತರಿಕೆರೆ ಏರಿ ಮೇಲೆ ಮೂರು ಕರಿ ಕುರಿ ಮರಿ

೫. ಹುಡುಗಿ ಕೆಡಿಸಿದಳೆ ಎಳೆ ಹುಡುಗನ ತಲೆ

೬. ಎರಡೆರಡಯೆಮ್ಮೆ ಮರದಡಿ ನಿಂತು ಕರಡದ ಹುಲ್ಲ ಕರಕರ ತಿಂತು.

೭ . ಕಾಗೆ ಪುಕ್ಕ ಗುಬ್ಬಿ ಪುಕ್ಕ , ಕಾಗೆ ಪುಕ್ಕ ಗುಬ್ಬಿ ಪುಕ್ಕ.

## ಪದ ಹುಡುಕೋಣ – ವಾದ್ಯಗಳು

| | | | | | | | | | | | |
|---|---|---|---|---|---|---|---|---|---|---|---|
| ಚಂ | ತಾ | ಕ | ರ್ಡ್ | ಸಿ | ಚಿ | ಸ | ಪ | ಟ | ಕ | ರ್ | ಲಾ |
| ಟ | ಳ | ವೀ | ತಾ | ಕೊ | ರ್ | ಟಿ | ಡೋ | ತಾ | ಡೋ | ಲು | ಸಿ |
| ತೀ | ಕಿ | ಜೋ | ಣೆ | ರಿ | ಗೆ | ಕೆ | ಕೆ | ಮೃ | ಗ | ದಂ | ತಾ |
| ನಾ | ನೀ | ಲು | ಳ | ಪಿ | ಚಿ | ಟಿ | ಪ | ವೀ | ದಂ | ಣೆ | ರ್ |
| ತ | ತಂ | ಬೂ | ತಂ | ಸ್ನು | ಟೀ | ಲು | ಜ್ಜೆ | ಕ | ಮೃ | ಸ | ಗ |
| ದ | ಬೂ | ರಿ | ಚಂ | ಬಾ | ಭ | ಲು | ತ | ಬ | ಲಾ | ರೋ | ಬಾ |
| ಟೆ | ರಿ | ಹಾ | ಡಿ | ಯಂ | ತ | ಠ | ಉ | ರಿ | ಕೊ | ದ್ | ನ್ಸು |
| ಮೋ | ಹಾ | ರ್ಮೋ | ನಾ | ನಿ | ಟೀ | ಮ | ಲು | ನಾ | ಟ | ಳ | ರಿ |
| ಸ್ವ | ಣೆ | ನಿ | ಸಿ | ದ | ದ | ಸ್ವ | ಟೆ | ಡೆ | ಕ | ಚ | ಲು |
| ಲ | ಖಂ | ಯಂ | ರ್ | ತಾ | ಸ್ವ | ಳ | ಚಂ | ವೀ | ಜ | ಕ | ಸಿ |
| ರಂ | ಭ | ಜ | ತ | ಕೀ | ರ್ಮೇ | ರ | ಳು | ರ | ಲ | ಸ | ಗ |
| ರಾ | ಳ | ಬ | ರ | ಬೋ | ಲು | ತಾ | ರಿ | ಕಿ | ತ | ಲಿ | ತ |
| ದೆ | ರ್ಡ್ | ಜ್ಜೆ | ಲಾ | ರ್ಡ್ | ಹ | ಲಾ | ರು | ಟ | ರಂ | ನ | ರಾ |
| ಗ | ತ | ಗೆ | ಹಾ | ಡ | ಹೆ | ವ | ಗೆ | ಜ | ಗ | ಮ | ಟೆ |

| | | | |
|---|---|---|---|
| ವೀಣೆ | ಸಿತಾರ್ | ನಾದಸ್ವರ | ಖಂಜರ |
| ಪಿಟೀಲು | ಸರೋದ್ | ಚಂಡೆ | ತಾಳ |
| ತಬಲಾ | ಕೊಳಲು | ಜಲತರಂಗ | ಚಿಟಿಕೆ |
| ಮೃದಂಗ | ತಂಬೂರಿ | ಬಾನ್ಸುರಿ | ಗೆಜ್ಜೆ |
| ಡೋಲು | ಹಾರ್ಮೋನಿಯಂ | ಕೀಬೋರ್ಡ್ | ತಮಟೆ |

## ಚಿತ್ರ ಶೀರ್ಷಿಕೆ : ಸುರೇಶ್ ಗೌಡರ್



ವಸಂತ ಋತು ... ಹೂವು ಹಣ್ಣು !





**ಕ್ರೀಡೆ ( ಚದುರಂಗ ) - ತನುಷ್ ಪಾಟೀಲ್**

**ನಾನು ಕೆಲವು ಚೆಸ್ ಟಿಪ್ಸ್ ಮಾತು ಟ್ರಿಕ್ಸ್ ಹೇಳಿಕೊಡುತ್ತೇನೆ.**

೧. ೩ ಮೂವ್ ಚೆಕ್ ಮೇಟ್

ಅದು ಹೆಸರು ಹೇಳುವಂತೆ, ನೀವು ೩ ಮೂವ್ಸ್ ಬಳಸಿ. ಮೊದಲು ಬಿಳಿ ಸೆಂಟರ್ ಪಾನನ್ನು E4 ಗೆ ಚಲಿಸಿ, ಕಪ್ಪು ತಮ್ಮ ಪಾನನ್ನು E5 ಗೆ ಮೂವ್ ಮಾಡಿ. ಬಿಳಿ ಕ್ವೀನನ್ನು F4 ಮತ್ತು ಕಪ್ಪು ಕಿಂಗ್ ಅನ್ನು E7 ಮತ್ತು ಕೊನೆಯದಾಗಿ ಬಿಳಿ ಕ್ವೀನ್ E5 ಗೆ ಬರುತ್ತದೆ. ಆಗ ನಾವು ಕಪ್ಪು ಕಿಂಗ್ ಅನ್ನು ಚೆಕ್ಮ್ಯಾಟ್ ಮಾಡಬಹುದು.

೨. ೪ ಮೂವ್ ಚೆಕ್ಮ್ಯಾಟ್

ಇಲ್ಲಿ ನಾವು ೪ ಮೂವ್ಸ್ ಬಳಸುತ್ತೇವೆ.

ಮೊದಲನೆಯದಾಗಿ ಬಿಳಿ ಪಾನ್ E4ಗೆ ಮೂವ್ ಮಾಡುತ್ತೇವೆ. ನಂತರ ಕಪ್ಪು ಪಾನ್ E5 , ಬಿಳಿ ಬಿಷಪ್ C4 ನಂತರ ಕಪ್ಪು ನೈಟ್ E6 ಗೆ ಬರುತ್ತದೆ. ಇದರ ನಂತರ ಬಿಳಿ ಕ್ವೀನ್ H5 ಗೆ ಕಪ್ಪು ಪಾನ್ A6 ಗೆ ಬರುತ್ತದೆ. ಕೊನೆಯದಾಗಿ ಕಪ್ಪು ಕ್ವೀನ್ F7 ಗೆ, ಈಗ ಕಪ್ಪು ಕಿಂಗ್ ಓಡಿಹೋಗಲು ಬ್ಲಾಕ್ ರಾಣಿ ತೆಗೆದುಕೊಳ್ಳಲು ಸಾಧ್ಯವಿಲ್ಲ ಆದ್ದರಿಂದ ಇದು ಚೆಕ್ಮ್ಯಾಟ್.

೩. ೨ ಮೂವ್ ಚೆಕ್ಮ್ಯಾಟ್

ಬಿಳಿ ಪಾನ್ F4 ಗೆ ಮತ್ತು ಕಪ್ಪು ಪಾನ್ E6. ಇದರ ನಂತರ ಬಿಳಿ ಪಾನ್ G4 ಮತ್ತು ಕಪ್ಪು ಕ್ವೀನ್ H4. ಇದರಿಂದ ಬಿಳಿ ಬ್ಲಾಕ್, ಸೆರೆಹಿಡಿಯಲು ಅಥವಾ ಹೊಡಿಯಲು ಸಾಧ್ಯವಿಲ್ಲ. ಆದ್ರಿಂದ ಕಪ್ಪು ಗೆಲ್ಲಲು ಸಾದ್ಯವಾಗುತ್ತದೆ.

**ಪಾಕ ಶಾಲೆ : ಪ್ರಕೃತಿ ಉಪಾಧ್ಯ**

**ಒಕ್ಕ್ ತೆಳಿ ಸಾರು**

ಕಾಯಿತುರಿ, ಹಸಿಮೆಣಸಿನಕಾಯಿಯನ್ನು ಅರೆದುಕೊಂಡು,ಅದಕ್ಕೆ ಬಿಸಿ ಅನ್ನದ ತಿಳಿಯನ್ನು ಹಾಕಿ ಉಪ್ಪು ಹಾಕಿ ಕರಿಬೇವು, ಕೊತ್ತಂಬರಿ ಸೊಪ್ಪು ಹಾಕಿ. ಜೀರಿಗೆ, ಸಾಸಿವೆ ಹಿಂಗ್ ನ ಒಗ್ಗರಣೆ ಹಾಕಿ. ಮಜ್ಜಿಗೆ ಬೆರೆಸಿ.

ಮಳೆಗಾಲದಲ್ಲಿ ಬಿಸಿಬಿಸಿಯಾಗಿ, ಬೇಸಗೆಯಲ್ಲಿ ತಣ್ಣಗೆ ಅನ್ನದೊಂದಿಗೆ ಸವಿಯಿರಿ..

**ಮಂಕುತಿಮ್ಮನ ಕಗ್ಗ :**

ಶ್ರೀ ವಿಷ್ಣು ವಿಶ್ವಾದಿಮೂಲ ಮಾಯಲೋಲ,
ದೇವ ಸರ್ವೇಶ ಪರಬ್ರೊಮ್ಮನೆಂದು ಜನಂ||
ಆವುದನು ಕಾಣದೊಡಮಳ್ತಿಯಿಂ ನಂಬಿಹುದೊ|
ಆ ವಿಚಿತ್ರಕೆ ನಮಿಸೊ - ಮಂಕುತಿಮ್ಮ|| ೧||
ಜೀವ ಜಡರೂಪ ಪ್ರಪಂಚವನದಾವುದೋ|
ಆವರಿಸಿಕೊಂಡುಮೊಳನೆರೆದುಮಿಹುದಂತೆ||
ಭಾವಕೊಳಪಡದಂತೆ ಅಳತೆಗಳವಡದಂತೆ|
ಆ ವಿಶೇಷಕ್ಕೆ ಮಣಿಯೊ - ಮಂಕುತಿಮ್ಮ|| ೨||